**Code No. 20 Y**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ – ಪ್ರಥಮ ದರ್ಜೆ – ದ್ವಿತೀಯ ಪತ್ರಿಕೆ

# (ಸೂತ್ರಗಳು)

ಜನವರಿ, 2018

ಸಮಯ : 1 ಗಂಟೆ 30 ನಿಮಿಷಗಳು

ಅಂಕಗಳು : 100

***ಸೂಚನೆ :*** ಉತ್ತರಗಳು ಸಂಕ್ಷಿಪ್ತ ಹಾಗೂ ಸಮಂಜಸವಾಗಿರಬೇಕು.

1. ಸಂಕ್ಷಿಪ್ತಾಕ್ಷರಗಳನ್ನು ಬರೆಯುವ ಕ್ರಮವನ್ನು ಉದಾಹರಣೆಯೊಂದಿಗೆ ವಿವರಿಸಿ ಬರೆಯಿರಿ. 10

2. 'ಹ' ಪ್ರಯೋಗಗಳನ್ನು ಉದಾಹರಣೆಯೊಂದಿಗೆ ವಿವರಿಸಿ ಬರೆಯಿರಿ. 10

3. ಅರ್ಧಾಕ್ಷರ ಸೂತ್ರಗಳನ್ನು ಉದಾಹರಣೆಯೊಂದಿಗೆ ವಿವರಿಸಿ ಬರೆಯಿರಿ. 10

4. ಈ ಕೆಳಗಿನವುಗಳಲ್ಲಿ ಯಾವುದಾದರೂ **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ : 4 × 5 = 20

   ಅ) ಸ್ವರಗಳು

   ಆ) ಅಧೋಮುಖ 'ಲ–ಳ'

   ಇ) ದ್ವಿರೂಪ ತವ–ದವ

   ಈ) ಸ್ತ್ರ ಅಥವಾ ಷ್ಟ್ರ ದೊಡ್ಡ ಕುಣಿಕೆಗಳು

   ಉ) ರೇಖಾಕ್ಷರಗಳ ವಿಭಾಗ

5. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಐದು*** ಪದಗಳಿಗೆ ಸಂಕ್ಷೇಪಣೆ ಬರೆಯಿರಿ : 5 × 1 = 5

   ಅ) ತೋಟಗಾರಿಕೆ

   ಆ) ರಾಜ್ಯಭಾರ

   ಇ) ನಿಯಮಾವಳಿ

   ಈ) ಪ್ರಸ್ತಾಪ

   ಉ) ನೈಸರ್ಗಿಕ

   ಊ) ಬ್ರಾಹ್ಮಣೇತರ

6. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಐದಕ್ಕೆ*** ಪದಗಳ ಸಮೂಹ ಬರೆಯಿರಿ : 5 × 1 = 5

ಅ) ಅಲ್ಪಾವಧಿ ಸಾಲ

ಆ) ಕನ್ನಡ ಸಾಹಿತ್ಯ ಪರಿಷತ್ತು

ಇ) ಗ್ರಾಮ ಸೇವಕರು

ಈ) ಜಮೀನ್ದಾರರು

ಉ) ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್

ಊ) ಪ್ರವಾಸೋದ್ಯಮ

7. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಐದಕ್ಕೆ*** ಛೇದಿಸುವಿಕೆ ಪದಗಳನ್ನು ಬರೆಯಿರಿ : 5 × 1 = 5

ಅ) ಚಾಕಚಕ್ಯತೆ

ಆ) ಮುಖ್ಯೋಪಾಧ್ಯಾಯರು

ಇ) ಹಕ್ಕು ಬಾಧ್ಯತೆ

ಈ) ಆಯವ್ಯಯ

ಉ) ವಂದೇ ಮಾತರಂ

ಊ) ನ್ಯಾಯಾನ್ಯಾಯ

8. ಈ ಕೆಳಗಿನ ಖಾಲಿ ಜಾಗಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ : 5 × 1 = 5

ಅ) ವಕ್ರರೇಖಾಕ್ಷರಕ್ಕೂ, ಸರಳ ರೇಖಾಕ್ಷರಕ್ಕೂ ನಡುವೆ ಬರುವ ವೃತ್ತವನ್ನು ವಕ್ರರೇಖಾಕ್ಷರದ ...................... ಬರೆಯಬೇಕು.

ಆ) ದ್ವಿಸ್ವರಕ್ಕೆ ಒಂದು ಸಣ್ಣ ಗೆರೆಯನ್ನು ಸೇರಿಸಿದರೆ ಇದಕ್ಕೆ ...................... ಎಂದು ಹೆಸರು.

ಇ) ಅರ್ಧಮಾಡಿದ ರೇಖಾಕ್ಷರದ ನಂತರ 'ಅ' ಸ್ವರ ಬಿಟ್ಟು ಬೇರೆ ಸ್ವರಗಳು ಕೇಳಿಬಂದರೆ ...................... ಬಳಸಕೂಡದು.

ಈ) ಪದಗಳಲ್ಲಿ ಒಂದಕ್ಕಿಂತ ಹೆಚ್ಚು ಸ್ವರಗಳಿರಬಹುದು ಆ ಸ್ವರ ...................... ಸ್ಥಾನವನ್ನು ನಿಷ್ಕರ್ಷಿಸುತ್ತದೆ.

ಉ) ದೊಡ್ಡವೃತ್ತದ ಮಧ್ಯದಲ್ಲಿ ಒಂದು ಚುಕ್ಕೆ ಇಟ್ಟು ದೊಡ್ಡ ವೃತ್ತವನ್ನು ರೇಖಾಕ್ಷರದ ಅಂತ್ಯದಲ್ಲಿ ಬಿಡಿಸಿ ಬರೆದರೆ ...................... ಅಂತ್ಯ ಪ್ರತ್ಯಯಗಳನ್ನು ಸೂಚಿಸುತ್ತದೆ.

9. ಈ ಕೆಳಗೆ ಕೊಟ್ಟಿರುವ ವಿಷಯವನ್ನು ಶೀಘ್ರಲಿಪಿಯಲ್ಲಿ ಅಗತ್ಯವಿರುವ ಕಡೆ ಸ್ವರಚಿಹ್ನೆಗಳನ್ನು ಉಪಯೋಗಿಸಿ ಬರೆಯಿರಿ : 30

ಮುಖ್ಯಮಂತ್ರಿಗಳ ಸ್ವಯಂ ಉದ್ಯೋಗ ಯೋಜನೆಯಡಿ ಜಿಲ್ಲಾ ಕೈಗಾರಿಕಾ ಕೇಂದ್ರ ಹಾಗೂ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ವತಿಯಿಂದ ಸ್ವಯಂ ಉದ್ಯೋಗ ಕೈಗೊಳ್ಳಲು ಎರಡು ಸಾವಿರ ಗ್ರಾಮೀಣ ಯುವಕ/ಯುವತಿಯರಿಗೆ ತರಬೇತಿ ನೀಡಿ, ಬೆಂಬಲ ಸೇವೆ ಒದಗಿಸಿ ಶೇಕಡಾ ಇಪ್ಪತ್ತೈದರಿಂದ ಶೇಕಡಾ ಮೂವತ್ತೈದರವರೆಗೆ ಸಹಾಯಧನ ಒದಗಿಸಿ ತಲಾ ಗರಿಷ್ಠ ಹತ್ತು ಲಕ್ಷ ರೂಪಾಯಿಗಳ ಬಂಡವಾಳ ಹೂಡಿಕೆಯೊಂದಿಗೆ ಗ್ರಾಮೀಣ ಕೈಗಾರಿಕೆಗಳ ಸ್ಥಾಪನೆಗೆ ಕ್ರಮಕೈಗೊಳ್ಳಲಾಗುವುದು.

ಮೈಸೂರು, ಮಂಗಳೂರು, ಚಿಕ್ಕಮಗಳೂರು ಹಾಗೂ ಚಿತ್ರದುರ್ಗದಲ್ಲಿ ಉತ್ಪಾದನೆ, ತರಬೇತಿ ಹಾಗೂ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮದ ವತಿಯಿಂದ 'ತೆಂಗು ನಾರಿನ ಭಾಗ್ಯ' ಯೋಜನೆಯಡಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ಬೆಂಗಳೂರಿನ ಅಂತರ್‌ರಾಷ್ಟ್ರೀಯ ಮಟ್ಟದ ಕಾಯರ್–ಎಕ್ಸ್‌ಪೋ ಆಯೋಜಿಸಲು ಉದ್ದೇಶಿಸಲಾಗಿದೆ.

ಕೈಗಾರಿಕಾ ಬೆಳವಣಿಗೆಗೆ ಬದ್ಧವಾಗಿರುವ ಸರ್ಕಾರ ಉದ್ಯಮ ಸ್ನೇಹಿಯಾದ ಹೊಸ ಕೈಗಾರಿಕಾ ನೀತಿಯನ್ನು ಜಾರಿಗೊಳಿಸಿದೆ. ಉದ್ಯಮಿಗಳು ಕೈಗಾರಿಕೆಗೆ ಅಗತ್ಯವಾದ ಜಮೀನನ್ನು ಸುಲಭವಾಗಿ ಪಡೆದುಕೊಳ್ಳಲು ಅನುವಾಗುವಂತೆ ಕಂದಾಯ ಕಾಯ್ದೆಗಳಿಗೆ ಅಗತ್ಯ ತಿದ್ದುಪಡಿ ಮಾಡಲಾಗಿದೆ. ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಪ್ರೋತ್ಸಾಹಿಸಲು ವಿಶೇಷ ರಿಯಾಯಿತಿಗಳನ್ನು ನೀಡಲಾಗಿದೆ.

ಗ್ರಾಮೀಣಾಭಿವೃದ್ಧಿಗಾಗಿ ಸರ್ಕಾರ ರೂಪಿಸಿರುವ ಹದಿನೈದು ಅಂಶಗಳ ಕಾರ್ಯಕ್ರಮಗಳು ರಾಷ್ಟ್ರಮಟ್ಟದಲ್ಲಿ ಪ್ರಶಂಸೆಗೆ ಪಾತ್ರವಾಗಿದ್ದು, ವಿದ್ಯುತ್ ವಲಯದಲ್ಲಿನ ವಿಶಿಷ್ಟ ಸಾಧನೆಗಾಗಿ ಕರ್ನಾಟಕಕ್ಕೆ ರಾಷ್ಟ್ರೀಯ ಮನ್ನಣೆ ಸಿಕ್ಕಿದೆ. 'ಕರ್ನಾಟಕ ಮೊಬೈಲ್ ಒನ್' ಮೂಲಕ ಸರ್ಕಾರವು 'ಅಂಗೈಯಲ್ಲಿ ಆಡಳಿತ' ಎನ್ನುವ ಜನಸ್ನೇಹಿ ಪರಿಕಲ್ಪನೆಯನ್ನು ಜಾರಿಗೊಳಿಸಲಾಗಿದ್ದು ಇದರಿಂದ ಸಾವಿರಾರು ಸೇವೆಗಳನ್ನು ಜನಸಾಮಾನ್ಯರ ಬೆರಳ ತುದಿಗೆ ತಲುಪಿಸಿ ಇಡೀ ರಾಷ್ಟ್ರದ ಗಮನಸೆಳೆಯುವಲ್ಲಿ ನಮ್ಮ ಸರ್ಕಾರವು ಯಶಸ್ವಿಯಾಗಿದೆ. ಇದರಿಂದ ಜನಸಾಮಾನ್ಯರು ಸರ್ಕಾರದ ಆಡಳಿತದ ಕಾರ್ಯವೈಖರಿಗಳನ್ನು ತಾವು ಕುಳಿತಲ್ಲಿಯೇ ಗಮನಿಸಬಹುದಾಗಿದೆ.